**ಸಾಕ್ಷಿಗೆ ದಿನಾಂಕಃ17-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ.CSS ವಕೀಲರಿಂದ ::**

ನಾನು ಪೊಲೀಸ್ ಇಲಾಖೆಯಲ್ಲಿ ಎ ಎಸ್ ಐ ಆಗಿ ನಿವೃತ್ತನಾಗಿರುತ್ತೇನೆ. ನಾನು ಪೊಲೀಸ್ ಇಲಾಖೆಯಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡಿರುತ್ತೇನೆ. ನಾನು ಕುಡ್ಲೂರಿನಿಂದ ಬೆಂಗಳೂರಿಗೆ 1958 ರಲ್ಲಿ ಹೋಗಿರುತ್ತೇನೆ. ನಾನು 1958 ರಿಂದ ಕುಡ್ಲೂರಿನಲ್ಲಿ ವಾಸ ಇಲ್ಲ ಎಂದರೆ ಸರಿ. ಈ ದಾವೆಯನ್ನು ಹೂಡುವ ಮೊದಲು ಪಂಚಾಯಿತಿಗೆ ನೋಟೀಸ್ ಅನ್ನು ನೀಡಿರುವುದಿಲ್ಲ ಆದರೆ ಅರ್ಜಿಯನ್ನು ನೀಡಿರುತ್ತೇನೆ. 1957 ರಲ್ಲಿ ನನ್ನ ಅಜ್ಜ ಹರಿಯಪ್ಪ ರವರು ನನ್ನ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿರುವ ದಾಖಲೆ ಬಗ್ಗೆ ನನ್ನ ತಂದೆ ತಾಯಿ ಮೃತರಾದ ನಂತರ 1986 ರಲ್ಲಿ ತಿಳಿದು ಬಂದಿರುತ್ತದೆ. ಸದರಿ ಸಮಯದಲ್ಲಿ ನಾನು ಇನ್ನು ಸಹ ವೃತ್ತಿಯಲ್ಲಿ ಇದ್ದೆ ಎಂದರೆ ಸರಿ. 1986 ರಿಂದ ದಾವಾ ಶೆಡ್ಯೂಲ್ ಸ್ವತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಲು ಪ್ರಾರಂಭ ಮಾಡಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತಿನಲ್ಲ ನಾನು ಕಾನೇಶುಮಾರಿ ನಂಬರ್ ಎಂದು ನಮೂದು ಮಾಡಿದ್ದು ಅದನ್ನು ನನ್ನ ಅಜ್ಜ ಮಾಡಿರುವ ವ್ಯವಸ್ಥಾಪತ್ರದ ಆಧಾರದಲ್ಲಿ ಬರೆಸಿರುತ್ತೇನೆ. ಕಾನೇಶುಮಾರಿ ದಾಖಲಾತಿಗಳು ಎಲ್ಲಿ ಸಿಗುತ್ತವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಕಾನೇಶುಮಾರಿ ಪದದ ಅರ್ಥ ಸಹ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ನೀಡಿರುವ ಚೆಕ್ಕುಬಂದಿಯನ್ನು ಮೇಲೆ ಹೇಳಿದ ವ್ಯವಸ್ಥಾಪತ್ರದ ಆಧಾರದಲ್ಲಿ ಬರೆಸಿರುತ್ತೇನೆ. 1972 ರಲ್ಲಿ ಗ್ರಾಮ ಪಂಚಾಯಿತಿ ಅಸ್ತಿತ್ವದಲ್ಲಿ ಇತ್ತು ಎಂದರೆ ಸರಿ. ಆ ರೀತಿ ಗ್ರಾಮ ಪಂಚಾಯಿತಿ ಅಸ್ತಿತ್ವದಲ್ಲಿ ಇದ್ದ ಕಾರಣ ಪಂಚಾಯಿತಿಯ ಆಸ್ತಿಗಳ ಬಗ್ಗೆ ಅಲ್ಲಿ ದಾಖಲಾತಿಗಳು ಇರುತ್ತವೆ ಎಂದರೆ ಇರಬಹುದು. 1983 ರಲ್ಲಿ 4-5 ಗ್ರಾಮಗಳು ಸೇರಿ 1 ಮಂಡಲ ಪಂಚಾಯಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿ ವ್ಯಾಪ್ತಿ ಒಳಗೆ ಗ್ರಾಮದಲ್ಲಿ ಬರುವ ಆಸ್ತಿಗಳ ಬಗ್ಗೆ ಮಂಡಲ ಪಂಚಾಯಿತಿ ಮತ್ತು ನಂತರದಲ್ಲಿ ಗ್ರಾಮ ಪಂಚಾಯಿತಿಯಲ್ಲಿನ assessment ನಮೂದು ಇರುತ್ತದೆ ಎಂದರೆ ಸರಿ. 1993 ರಲ್ಲಿ ಮಂಡಲಪಂಚಾಯಿತಿ ಹೋಗಿ ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬಂದಿರುತ್ತವೆ ಎಂದರೆ ಸರಿ.

ಕುಡ್ಲೂರು ಗ್ರಾಮ ಪಂಚಾಯಿತಿಯ assessment 288/242 ರಲ್ಲಿ ಪ್ರತಿವಾದಿಯ ಹೆಸರಿನಲ್ಲಿ 19 x 58 ಅಡಿ ವಿಸ್ತೀರ್ಣದ ನಿವೇಶನ ಇರುತ್ತದೆ ಎಂದರೆ ಸರಿ. ಸದರಿ ನಿವೇಶನವು ಈಗ ಪಂಚಾಯಿತಿ ದಾಖಲಾತಿಗಳ ಪ್ರಕಾರ ಚದರ ಮೀಟರ್ ಲೆಕ್ಕದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ತಾಲ್ಲೂಕು ಸರ್ವೇಯರ್ ರವರ ಮುಖಾಂತರ ಅಳತೆ ಮಾಡಿಸಿದ ನಂತರ ಇ ಸ್ವತ್ತು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಪ್ರತಿವಾದಿಯ ಆಸ್ತಿಗೆ ಸಂಬಂಧಪಟ್ಟಂತೆ ಸರ್ವೇಯರ್ ಮುಖಾಂತರ ಅಳತೆ ಮಾಡಿ ಪ್ರತಿವಾದಿಯ ಹೆಸರಿಗೆ ಇ ಸ್ವತ್ತು ಸಹ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಇ ಸ್ವತ್ತಿನಲ್ಲಿ ಪ್ರತಿವಾದಿಯ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಬಾಳಜ್ಜನ ಮನೆ, ಪಶ್ಚಿಮಕ್ಕೆ ಶಿವಣ್ಣನ ನಿವೇಶನ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಶಿವಣ್ಣನ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಆಸ್ತಿಗೆ ನೀಡಿರುವ ಇ ಸ್ವತ್ತು ಪಂಚಾಯಿತಿ ದಾಖಲಾತಿಗಳ ಹಾಗೂ ವಸ್ತು ಸ್ಥಿತಿಯ ಅಧಾರದಲ್ಲಿ ನೀಡಲಾಗಿರುತ್ತದೆ ಎಂದರೆ ಇರಬಹುದು. ನಾನು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಮಂಗಳೂರು ಹೆಂಚಿನ ಮನೆ ಇರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ, ಅದರೆ ಕರಿಹೆಂಚಿನ ಮನೆ ಇರುತ್ತದೆ ಎಂದು ತಿಳಿಸಿರುತ್ತೇನೆ. ಈಗ ಹೇಳುತ್ತಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ನಲ್ಲಿ ವಿವರಿಸಿರುವ ಸ್ವತ್ತು ಕುಡ್ಲೂರು ಗ್ರಾಮ ಪಂಚಾಯಿತಿಯಲ್ಲಿ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಈಗಿನ ಮಾರುಕಟ್ಟೆ ಬೆಲೆ ನನ್ನ ಪ್ರಕಾರ 1 ಲಕ್ಷಕ್ಕಿಂತ ಅಧಿಕ ಇರಬಹುದು. ನಾನು ಸದರಿ ಮೌಲ್ಯಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ನ್ಯಾಯಾಂಗ ಶುಲ್ಕ ಕಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಕಟ್ಟಲು ತಯಾರಿರುತ್ತೇನೆ ಎಂದು ನುಡಿದಿರುತ್ತಾರೆ.

ನಾನು ಹೇಳುತ್ತಿರುವ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ 1957-58 ರಲ್ಲಿ ನನ್ನ ಅಜ್ಜ ಹರಿಯಪ್ಪ ರವರು ಯಾವುದೇ ವ್ಯವಸ್ಥಾಪತ್ರವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಹರಿಯಪ್ಪನಿಗೆ 5 ಜನ ಗಂಡು ಮಕ್ಕಳು ಇದ್ದರು.

ನಿಪಿ5 ರಲ್ಲಿ ಇರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ5 ರಲ್ಲಿ ಅಪ್ರಾಪ್ತ ವಯಸ್ಕರಿಗೆ ಪೋಷಕರು ಯಾರು ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ5 ರಲ್ಲಿ

1957 ರಲ್ಲಿ ನಾನು ಅಪ್ರಾಪ್ತ ವಯಸ್ಕನಾದ ಸಮಯದಲ್ಲಿ ಯಾರು ಯಾವುದೇ ಪೋಷಕರು ಇಲ್ಲದೇ ಮಾಡಿರುವ ಪತ್ರ ಕಾನೂನಿನಡಿ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಿದ್ದಪ್ಪ ರವರು 1986 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನಿಪಿ5 ರಲ್ಲಿ ನನ್ನ ತಂದೆ ಸಿದ್ದಪ್ಪ ರವರನ್ನು ಹೊರತುಪಡಿಸಿ ನನ್ನ ಹೆಸರಿಗೆ ಯಾವ ಕಾರಣಕ್ಕೆ ಸದರಿ ಪತ್ರ ಮಾಡಲಾಗಿರುತ್ತದೆ ಎನ್ನುವ ಬಗ್ಗೆ ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿ. ನಿಪಿ5 ರಲ್ಲಿ ನನ್ನ ಅಜ್ಜ ಹರಿಯಪ್ಪ ರವರು ಅವರ ಮಕ್ಕಳಿಗೆ ಇತರೇ ಆಸ್ತಿಗಳನ್ನು ಹಂಚಿಕೆ ಮಾಡಿರುವ ಬಗ್ಗೆ ನಮೂದು ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ನನ್ನ ಅಜ್ಜನ ಮಕ್ಕಳು ಸದರಿ ಆಸ್ತಿಯನ್ನು ಹಾಳು ಮಾಡುತ್ತಾರೆ ಎನ್ನುವ ಕಾರಣಕ್ಕೆ ಸದರಿ ಆಸ್ತಿಯನ್ನು ನನ್ನ ಅಜ್ಜ ನನ್ನ ಹೆಸರಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವಂತೆ ನನ್ನ ಅಜ್ಜನ ಎಲ್ಲಾ ಮಕ್ಕಳು ನಿಪಿ5 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಾಖಲೆಯನ್ನು ನನ್ನ ತಂದೆ ಆಸ್ತಿಯನ್ನು ಹಾಳು ಮಾಡುತ್ತಾರೆ ಎಂದು ನನ್ನ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು 1 ನೇ ಪ್ರತಿವಾದಿಗೆ ನೋಡಿಕೊಳ್ಳಲು ಬಿಟ್ಟಿರುತ್ತೇನೆ ಎಂದು ಹೇಳುತ್ತಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಸ್ವಾಧೀನ ಬಿಟ್ಟು ಕೊಟ್ಟಿರುವ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ನನ್ನ ತಾಯಿ 2013 ರಲ್ಲಿ ಮೃತರಾಗಿರುತ್ತಾರೆ.

ನನ್ನ ತಂದೆ ಜೀವಂತ ಇದ್ದಾಗಲೂ ಸಹ ದಾವಾ ಶೆಡ್ಯೂಲ್ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೂ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ5 ರ ಆಧಾರದಲ್ಲಿ ದಾವಾ ಶೆಡ್ಯೂಲ್ ಸ್ವತ್ತನ್ನು ನನ್ನ ಆಸ್ತಿ ಎಂದು ಹೇಳಿಕೊಂಡು ದಾವಾ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(2 ನೇ ಪ್ರತಿವಾದಿಯ ಪರ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: